12.20 ಪಿಎಂ.

ಶ್ರೀ ಎಂ.ಎಸ್.ಆತ್ಮಾನಂದ:- ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದು, ಮಂಡ್ಯ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರು ತಮ್ಮ ಜೀವನ ನಿರ್ವಹಣೆಗಾಗಿ ಕೃಷಿಯೇತರ ಚಟುವಟಿಕೆಗಳ ಮೇಲೆ ಅವಲಂಬಿತರಾಗಿರತಕ್ಕಂಥಾದ್ದು; ಆ ಕಾರಣಕ್ಕಾಗಿ ಸ್ವಾವಲಂಬನಾ ಸಾಲದ ಯೋಜನೆ, ತರಬೇತಿ ಯೋಜನೆಗೆ ನಮ್ಮ ಜಿಲ್ಲೆಯಲ್ಲಿ ಅವರಿಗೆ ಹೆಚ್ಚು ಅನುದಾನವನ್ನು ಕೊಡಬೇಕೆಂದು ಅವರಲ್ಲಿ ನಾನು ಕೋರುತ್ತೇನೆ.

ಶ್ರೀ ಎಂ.ಎಲ್.ಉಸ್ತಾದ್:- ಮಾನ್ಯ ಅಧ್ಯಕ್ಷರೇ, ಈ ಮತೀಯ ಅಲ್ಪಸಂಖ್ಯಾತ ರೈತರುಗಳಿಗೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಹೋದ ಸಲ ಸ್ವಾವಲಂಬನಾ ಯೋಜನೆ ಏನು ಇದೆ, ಅದರ ಫಲಾನುಭವಿಗಳೂ 184 ಜನರಿಗೆ ಖರ್ಚಾದ ಮೊತ್ತ 10 ಲಕ್ಷದ 59 ಸಾವಿರ ರೂಪಾಯಿಗಳು, ಈ ಸಲ ಮತ್ತೆ ಅದನ್ನು ಹೆಚ್ಚು ಮಾಡುತ್ತೇವೆ. ಈ ಸಲದ ಫಲಾನುಭವಿಗಳು 100 ಜನರು ಇದ್ದಾರೆ. ಈ ಸಲ 7 ಲಕ್ಷದ 79 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ 74 ಪ್ರಶ್ನೆಗಳ ಪೈಕಿ 54 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು:- ಅನುಬಂಧ-1 ಮಂಡಿಸಲಾಯಿತು. ಅನುಬಂಧ-1. ಮೊನ್ನೆ 15ನೇ ತಾರೀಖು ರಾಷ್ಟ್ರಪತಿಯವರ ಚುನಾವಣೆ ನಡೆದು ಈ ದಿವಸ ರಾಷ್ಟ್ರಪತಿಗಳು ಪ್ರಮಾಣ ವಚನವನ್ನು ತೆಗೆದುಕೊಂಡಿದ್ದಾರೆ. ಅದರ ಬಗ್ಗೆ ಈಗ ಮಾನ್ಯ ಮುಖ್ಯಮಂತ್ರಿಗಳು ಎರಡು ಮಾತುಗಳನ್ನು ಆಡುತ್ತಾರೆ.

2. ಅಭಿನಂದನೆ ಸಲ್ಲಿಕೆ

ಭಾರತರತ್ನ ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ರಾಷ್ಟ್ರದ 12ನೆಯ ರಾಷ್ಟ್ರಪತಿಗಳಾಗಿ ಪ್ರಮಾಣವಚನ ಸ್ವೀಕರಿಸಿರುವ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳ ಸಲ್ಲಿಕೆ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಭಾರತರತ್ನ ಡಾ।। ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಇಂದು ನಮ್ಮ ರಾಷ್ಟ್ರದ 12ನೆಯ ರಾಷ್ಟ್ರಪತಿಗಳಾಗಿ ಪ್ರಮಾಣವಚನ ಸ್ವೀಕರಿಸಿರುವ ಈ ಶುಭ ಮುಹೂರ್ತದಲ್ಲಿ ನಾನು ಈ ಸಭೆಯ ಪರವಾಗಿ ಹೃತ್ಪೂರ್ವಕವಾದಂಥ ಅಭಿನಂದನೆಗಳನ್ನು ಸಮರ್ಪಿಸಲು ತಮ್ಮ ಅಪ್ಪಣೆಯನ್ನು ಕೋರುತ್ತಿದ್ದೇನೆ. 1931ರ ಅಕ್ಟೋಬರ್ 15 ರಂದು ಬಡ ಮೀನುಗಾರರ ಕುಟುಂಬದಲ್ಲಿ ಜನಿಸಿದ ಅಹುಲ್ ಫಕೀರ್ ಜೈನಲುದ್ದೀನ್ ಅಬ್ದುಲ್ ಕಲಾಂ ಅವರು, ವಿಶ್ವವಿಖ್ಯಾತ ಪರಮಾಣು ವಿಜ್ಞಾನಿ. ಇಂದು ಪ್ರಪಂಚದ ಬಹುದೊಡ್ಡ ಪ್ರಜಾಸತ್ತಾತ್ಮಕ ರಾಷ್ಟ್ರದ ಅತ್ಯುನ್ನತ ಪದವಿಯಾದ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿರುವುದು ವಿಶೇಷ ಹೆಮ್ಮೆಯನ್ನು ತರುವ ಬೆಳವಣಿಗೆ ಮತ್ತು ವಿಷಯವಾಗಿದೆ. ಅತ್ಯಂತ ಸಾಧಾರಣ ಹಿನ್ನೆಲೆಯಿಂದ ಬಂದು ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಹೊಂದಿದ್ದ ಶ್ರೀಯುತರು

ನಮ್ಮ ದೇಶದ ರಕ್ಷಣಾ ಇಲಾಖೆಯಲ್ಲಿ ಪರಮಾಣು ವಿಜ್ಞಾನಿಯಾಗಿ ಹಾಗೂ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರರಾಗಿ ನಿಯೋಜಿತರಾದ ಮೇಲೆ ಬೆಂಗಳೂರಿಗೆ ಬಂದು ನಮಗೆ ಅವರು ಬಹಳ ಹತ್ತಿರದವರಾಗಿದ್ದಾರೆ. ಶ್ರೀಯುತರು ದೇಶದ ಅತ್ಯುನ್ನತ ಪ್ರಶಸ್ತಿಯಾದ ಭಾರತರತ್ನ ಸೇರಿದಂತೆ ಹಲವಾರು ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇಂಥ ಮಹಾನ್ ವ್ಯಕ್ತಿ ಈ ದೇಶದ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿರುವುದು ನಮಗೆ ಹೆಮ್ಮೆ ತರುವ ವಿಷಯವಾಗಿರುತ್ತದೆ. ಅವರಿಗೆ ಮತ್ತೊಮ್ಮೆ ನಾನು ಈ ಸದನದ ಪರವಾಗಿ ತಮ್ಮ ಮೂಲಕ ನಮ್ಮ ಶುಭಾಶಯಗಳನ್ನು ಸಮರ್ಪಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ದಿವಸ ರಾಷ್ಟ್ರದ ನೂತನ ರಾಷ್ಟ್ರಪತಿಗಳಾಗಿ ಪ್ರಮಾಣವಚನವನ್ನು ತೆಗೆದುಕೊಂಡಂಥ ಡಾ|| ಅಬ್ದುಲ್ ಕಲಾಂ ಅವರ ಬಗ್ಗೆ ಅಭಿನಂದನಾ ಸಂದೇಶದ ಸೂಚನೆಯನ್ನು ಏನು ಕೊಟ್ಟಿದ್ದಾರೆ, ಆ ಒಂದು ಸೂಚನೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತಾ, ಡಾ|| ಅಬ್ದುಲ್ ಕಲಾಂ ಅವರು ಈ ರಾಷ್ಟ್ರದ ಒಂದು ಉನ್ನತ ಹುದ್ದೆಯನ್ನು ಅಲಂಕಾರ ಮಾಡಿದಂಥ ಸಂದರ್ಭದಲ್ಲಿ ನಾವು ಇಲ್ಲಿ ನೆನಪಿಸಿಕೊಳ್ಳುವಂಥಾದ್ದು, ಈ ದೇಶದಲ್ಲಿ ಒಂದು ಬಡ ಕುಟುಂಬದಿಂದ, ಕೆಳಮಟ್ಟದಿಂದ ರಾಷ್ಟ್ರದ ಒಂದು ಉನ್ನತವಾದ ಸ್ಥಾನವನ್ನು ಅಲಂಕರಿಸಿದಂಥ ವ್ಯಕ್ತಿಗಳಲ್ಲಿ ಡಾ|| ಅಬ್ದುಲ್ ಕಲಾಂ ಅವರು ಒಬ್ಬರು ಎನ್ನುವಂಥಾದ್ದನ್ನು ನಾವು ಅಭಿಮಾನದಿಂದ ಹೇಳಬೇಕಾಗುತ್ತದೆ. ಏಕೆಂದರೆ ಆ ರಾಷ್ಟ್ರಪತಿಯಂತಹ ಉನ್ನತ ಹುದ್ದೆಯಲ್ಲಿ ಇರಬೇಕಾದಂಥ ವ್ಯಕ್ತಿಗೆ ಈ ರಾಷ್ಟ್ರದ ಬಡ ಜನತೆಯ ದುಃಖ ದುಮ್ಮಾನಗಳ ಅರಿವು ಇದೆ ಎನ್ನುವಂಥಾದ್ದು ಬಹಳ ಪ್ರಮುಖವಾದಂಥಾದ್ದು.

ಹೀಗಾಗಿ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಒಬ್ಬ ವಿಜ್ಞಾನಿಯಾಗಿ ಖ್ಯಾತಿಯನ್ನು ಪಡೆದಂತಹ ಒಬ್ಬ ವ್ಯಕ್ತಿ ಇವತ್ತು ರಾಷ್ಟ್ರದ ಮುಖ್ಯ ಹುದ್ದೆಯನ್ನು ವಹಿಸಿಕೊಂಡಿದ್ದಾರೆ. ಮತ್ತೊಂದು ವಿಚಾರ ಇಲ್ಲಿ ನಾನು ಹೇಳುವಂಥಾದ್ದು ಎಂದರೆ ಮಾನ್ಯ ಅಬ್ದುಲ್ ಕಲಾಂ ಅವರ ಹೆಸರು ಈ ರಾಷ್ಟ್ರಪತಿ ಹುದ್ದೆಗೆ ಸೂಚನೆಯಾದಂಥ ಸಂದರ್ಭದಲ್ಲಿ ಇಡೀ ದೇಶಾದ್ಯಂತ ಚರ್ಚೆಯಾಯಿತು. ಏನೆಂದರೆ ದೇಶದ ರಾಜಕಾರಣದಲ್ಲಿದ್ದಂಥ ವ್ಯಕ್ತಿಗಳು ಇಲ್ಲಿಯವರೆಗೂ ಆ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸುತ್ತಿದ್ದರು. ಆದರೆ ರಾಜಕೀಯದಲ್ಲಿ ಇಲ್ಲದಂಥ ವ್ಯಕ್ತಿ ಆ ಒಂದು ರಾಷ್ಟ್ರಪತಿ ಹುದ್ದೆಗೆ ಸರಿದೂಗುತ್ತಾರೋ ಹೇಗೆ ಎನ್ನುವಂಥಾದ್ದೂ ಈ ದೇಶದಲ್ಲಿ ಚರ್ಚೆಯಾಯಿತು. ಹೀಗಾಗಿ ಒಬ್ಬ ವಿಜ್ಞಾನಿ, ರಾಜಕೀಯೇತರ ಒಬ್ಬ ವ್ಯಕ್ತಿ ಇವತ್ತು ರಾಷ್ಟ್ರಪತಿ ಹುದ್ದೆಯನ್ನು ಅಲಂಕಾರ ಮಾಡಿ ಮತ್ತು ಆ ಹುದ್ದೆಯನ್ನು ವಹಿಸಿಕೊಂಡು ಆ ಜವಾಬ್ದಾರಿ ಬಗ್ಗೆ ಬಹುಶಃ ನನಗನ್ನಿಸುತ್ತದೆ, ಇವತ್ತು ರಾಜಕೀಯೇತರ ವ್ಯಕ್ತಿಯಾದಂಥ ಮಾನ್ಯ ಅಬ್ದುಲ್ ಕಲಾಂ ಅವರು ಈ ಒಂದು ರಾಷ್ಟ್ರಪತಿ ಹುದ್ದೆಗೆ ಗೌರವವನ್ನುತರುವಂಥಾದ್ದು ಅಷ್ಟೇ ಅಲ್ಲ, ಒಬ್ಬ ಯಶಸ್ವೀ ರಾಷ್ಟ್ರಪತಿಯಾಗಿ ಕೆಲಸ ಮಾಡುತ್ತಾರೆ ಎನ್ನುವಂಥ ವಿಶ್ವಾಸ ಮತ್ತು ನಂಬಿಕೆ ನನಗಿದೆ ಎನ್ನುವಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ ಮತ್ತು ಇನ್ನೊಂದು ವಿಶೇಷತೆ ಇದರಲ್ಲಿ ಏನಿದೆ ಎಂದರೆ ಡಾ|| ಅಬ್ದುಲ್ ಕಲಾಂ ಅವರು ಈ ಒಂದು ರಾಷ್ಟ್ರಪತಿ ಹುದ್ದೆಗೆ ಸ್ಪರ್ಧೆಗೆ ನಿಂತಂಥ ಸಂದರ್ಭದಲ್ಲಿ, ಏನು ಚುನಾವಣೆ ನಡೆಯಿತೋ, ಆ ಸಂದರ್ಭದಲ್ಲಿ ನಾವು ಆ ಕಡೆ ಇರಬಹುದು, ಈ ಕಡೆ ಇರಬಹುದು, ಹಿಂದೆ ನಡೆದ ರಾಜ್ಯಸಭೆ ಚುನಾವಣೆ ಇರಬಹುದು, ವಿಧಾನಪರಿಷತ್ತಿನ ಚುನಾವಣೆ ಇರಬಹುದು, ಆ ಕಡೆ ಇದ್ದಂಥವರು ಒಂದು ಕಡೆ ವೋಟನ್ನು ಹಾಕುವಂಥದ್ದು, ಈ ಕಡೆ

ಇದ್ದವರು ಒಂದು ಕಡೆ ವೋಟನ್ನು ಹಾಕುವಂಥದ್ದು; ಆದರೆ ಈ ಚುನಾವಣೆಯಲ್ಲಿ ಮಾತ್ರ ಕೆಲವು ಬೆರಳೆಣಿಕೆಯಷ್ಟು ಇದ್ದಂಥ ಸದಸ್ಯರನ್ನು ಬಿಟ್ಟರೆ ಆ ಕಡೆ ಇದ್ದಂಥವರು ಮತ್ತು ಈ ಕಡೆ ಇದ್ದಂಥವರು ಆಡಳಿತರೂಢ ಮತ್ತು ವಿರೋಧಪಕ್ಷದ ಬಹುತೇಕ ಎಲ್ಲಾ ಸದಸ್ಯರು ಡಾ।। ಅಬ್ದುಲ್ ಕಲಾಂ ಅವರಿಗೆ ನಾವು ಮತವನ್ನು ಕೊಟ್ಟು ಅವರು ಚುನಾವಣೆಯಲ್ಲಿ ಜಯಶೀಲರಾಗಲಿಕ್ಕೆ ಇವತ್ತು ನಮ್ಮೆಲ್ಲರ ಒಂದು ಸಹಾಯ ದೊರೆತಿದೆ ಎನ್ನುವಂಥಾದ್ದನ್ನು ಈ ಸಂದರ್ಭದಲ್ಲಿ ಹೇಳಿ, ಡಾ।। ಅಬ್ದುಲ್ ಕಲಾಂ ಅವರು ಇವತ್ತೇನು ರಾಷ್ಟ್ರಪತಿ ಹುದ್ದೆಯನ್ನು, ಆ ಜವಾಬ್ದಾರಿಯನ್ನು ಏನು ತೆಗೆದುಕೊಂಡಿದ್ದಾರೆ, ಅವರಿಗೆ ನಮ್ಮ ಪಕ್ಷದ ಪರವಾಗಿ ಮತ್ತು ಎಲ್ಲರ ಪರವಾಗಿ ನಾನು ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ, ಇಲ್ಲಿ ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಸೋಮಶೇಖರ್(ಮಳವಳ್ಳಿ):- ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರದಲ್ಲಿ 12ನೆಯ ರಾಷ್ಟ್ರಪತಿಯಾಗಿ ನಮ್ಮೆಲ್ಲರಿಗೂ ಮೆಚ್ಚಿಗೆಯಾಗತಕ್ಕಂಥ ಒಬ್ಬ ಅಂತರರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದಂಥ ಡಾ।। ಅಬ್ದುಲ್ ಕಲಾಂ ಅವರು ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಇವರಿಗೆ ಅನೇಕ ದೊಡ್ಡ ಪಕ್ಷಗಳ ಮುಖಂಡರುಗಳು ಬೆಂಬಲವನ್ನು ಕೊಟ್ಟಿದ್ದಾರೆ ಮತ್ತು ಇವರನ್ನು ಸ್ವಾಗತ ಮಾಡಿದ್ದಾರೆ. ನಮ್ಮ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಇವರಿಗೆ ಯಾವುದೇ ರಾಜಕೀಯ ಪಕ್ಷದ ಸೋಂಕು ಇಲ್ಲ. ಮೊದಲಿನಿಂದಲೂ ಸಹ ಒಬ್ಬ ಅಪ್ಪಟ ರಾಷ್ಟ್ರಪ್ರೇಮಿ ಮತ್ತು ವಿಜ್ಞಾನಿಯಾಗಿದ್ದಾರೆ. ಇವತ್ತೇನು ನಮ್ಮ ದೇಶದಲ್ಲಿ ತೋರಿಸಿಕೊಟ್ಟಿದ್ದಾರೆ ಎಂದರೆ,ಇಡೀ ಪ್ರಪಂಚದಲ್ಲಿ ಒಬ್ಬ ಅತ್ಯುತ್ತಮ ವಿಜ್ಞಾನಿಯಾಗಿ ರಾಷ್ಟ್ರದ ಬೆಳವಣಿಗೆಗೆ ಕೊಡುಗೆಯನ್ನು ಕೊಟ್ಟಿರತಕ್ಕಂಥ ವ್ಯಕ್ತಿಯನ್ನು ನಾವು ಗುರುತಿಸಿದ್ದೇವೆ, ಅವರನ್ನು ನಾವು ಅತ್ಯುನ್ನತ ಸ್ಥಾನದಲ್ಲಿ ಕೂರಿಸಿದ್ದೇವೆ. ಇದು ಅವರಿಗಷ್ಟೆ ಅಲ್ಲ, ನಮ್ಮ ದೇಶಕ್ಕೆ ಹೆಮ್ಮೆ ತರತಕ್ಕಂಥ ಒಂದು ವಿಚಾರ ಮತ್ತು ಡಾ।। ಅಬ್ದುಲ್ ಕಲಾಂ ಅವರು ಅಧಿಕಾರವನ್ನು ವಹಿಸಿಕೊಳ್ಳುವುದಕ್ಕೆ ಮೊದಲು ಅವರಿಗೆ ಇರತಕ್ಕ ಒಂದು ದೃಷ್ಟಿಕೋನದ ಬಗ್ಗೆ ಅವರು ಅನೇಕಬಾರಿ ಹೇಳಿದ್ದಾರೆ. ನನಗೆ ಒಂದು ವಿಷನ್ ಇದೆ, ಈ ರಾಷ್ಟ್ರವನ್ನು ಹೇಗೆ ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗಬೇಕು ಎಂದು ಅದರ ಬಗ್ಗೆ ನಾನು ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇನೆ ಎನ್ನತಕ್ಕ ವಿಚಾರವನ್ನೂ ಸಹ ಅವರು ಹೇಳಿದ್ದಾರೆ. ನಮಗಾದರೂ ಆ ನಂಬಿಕೆ ಇದೆ. ಈ ಒಂದು ದೇಶದ, ನಮ್ಮ ರಾಷ್ಟ್ರವನ್ನು ಚೆನ್ನಾಗಿ ಅರಿತವರು ಹಾಗೂ ಕೆಳವರ್ಗದಿಂದ ಬಂದಂಥವರು, ಎಲ್ಲಾ ರಂಗದಲ್ಲೂ ಪರಿಚಯವನ್ನಿಟ್ಟುಕೊಂಡಿರತಕ್ಕಂಥವರು ಮತ್ತು ಅವರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದರೂ ಸಹ ಎಲ್ಲಾ ಧರ್ಮಗಳ ಬಗ್ಗೆ ಅತ್ಯಂತ ಹೆಚ್ಚು ಗೌರವವನ್ನು ಇಟ್ಟುಕೊಂಡಿರತಕ್ಕ ಒಬ್ಬ ಭಾರತೀಯ. ಹೆಚ್ಚಾಗಿ ಅವರನ್ನು ಒಬ್ಬ ಭಾರತೀಯ ಎಂದು ಹೇಳಬಹುದು. ಅಂಥವರಿಗೆ ನಮ್ಮ ಕೇಂದ್ರದ ಎನ್‌ಡಿಎ ಅವರು ಅಂದರೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಮತ್ತು ಕಾಂಗ್ರೆಸ್‌ನವರು ಮತ್ತು ಬೇರೆ ಬೇರೆ ಎಲ್ಲಾ ಪಕ್ಷಗಳವರೂ ಬೆಂಬಲವನ್ನು ಕೊಟ್ಟಿದ್ದಾರೆ. ಅವರಿಗೆ ನಾವು ಸಹ ಬೆಂಬಲವನ್ನು ಕೊಟ್ಟಿದ್ದೇವೆ. ಅವರು ಈ ರಾಷ್ಟ್ರವನ್ನು ಒಳ್ಳೆಯ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕು;ಹಾಗೆ ತೆಗೆದುಕೊಂಡು ಹೋಗುತ್ತಾರೆ ಎಂದು ನಾವು ಅಂದುಕೊಂಡಿದ್ದೇವೆ. ಅವರಿಗೆ ದೇವರು ಇನ್ನೂ ಹೆಚ್ಚಿನ ಆಯುರಾರೋಗ್ಯವನ್ನು ಕೊಟ್ಟು ಅವರು ಈ ನಮ್ಮ ರಾಷ್ಟ್ರದ ಒಂದು ಚರಿತ್ರೆಯನ್ನೇ ಬದಲಾವಣೆ ಮಾಡಲಿ, ಅವರಿಗೆ ಸಂಪೂರ್ಣವಾದ ಬೆಂಬಲವನ್ನು ನಾವು ಕೊಡೋಣ

ಎಂದು ಹೇಳಿ, ಮತ್ತೊಮ್ಮೆ ತಾವು ಮಂಡಿಸಿರತಕ್ಕಂಥ ಅಭಿನಂದನಾ ನಿರ್ಣಯಕ್ಕೆ ನಾವು ಬೆಂಬಲವನ್ನು ಕೊಟ್ಟು ಸ್ವಾಗತ ಮಾಡುತ್ತೇವೆ ಮತ್ತು ಅವರಿಗೆ ನಾವು ಶುಭವನ್ನು ಕೋರುತ್ತೇವೆ.

ಶ್ರೀ ಬೆಲ್ಲದ್ ಚಂದ್ರಕಾಂತ್-ಗುರಪ್ಪ (ಧಾರವಾಡ):– ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು, ಈ ರಾಷ್ಟ್ರದ ಉನ್ನತವಾದಂತಹ ಸ್ಥಾನವನ್ನು ಅಲಂಕರಿಸಿದ ಡಾ।। ಅಬ್ದುಲ್ ಕಲಾಂ ಅವರ ಪ್ರತಿಜ್ಞಾ ವಿಧಿಯಿಂದ ರಾಷ್ಟ್ರದ ಮುನ್ನಡೆಯಲ್ಲಿ ಅವರ ಪಾತ್ರದ ಬಗ್ಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ. ನಾನೂ ಸಹಿತ ಇವತ್ತಿನ ದಿವಸ ಬಹುಶಃ ಈ ರಾಷ್ಟ್ರದ ಉನ್ನತ ಇತಿಹಾಸವನ್ನು ನಿರ್ಮಾಣ ಮಾಡುವಲ್ಲಿ, ಈ ಪ್ರಜಾತಂತ್ರಕ್ಕೆ ಒಂದು ಬಹು ದೊಡ್ಡ ಕೊಡುಗೆಯನ್ನು ಕೊಡುವಲ್ಲಿ, ಈ ರಾಷ್ಟ್ರ ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲಿ ಅಗ್ರಗಣ್ಯ ರಾಷ್ಟ್ರವನ್ನಾಗಿ ಮಾಡುವಲ್ಲಿ ಈಗಾಗಲೇ ಡಾ।। ಅಬ್ದುಲ್ ಕಲಾಂ ಅವರು ನೀಡಿದಂತಹ ಒಂದು ಸೇವೆಯನ್ನು, ಅವರ ವಿಜ್ಞಾನದ ಕೊಡುಗೆಯನ್ನು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗುತ್ತದೆ. ಈ ಒಬ್ಬ ವಿಜ್ಞಾನಿ, ಒಬ್ಬ ಸಾಮಾನ್ಯ ಬಡ ಕುಟುಂಬದಿಂದ ಬಂದು ಸಾಮಾನ್ಯ ಶಾಲೆಗಳ ಮೂಲಕ, ಬಡ ಜನತೆಯ ಮೂಲಕ ತಾನು ಇಂತಹ ಒಂದು ರಾಷ್ಟ್ರದ ಉನ್ನತ ಸ್ಥಾನವನ್ನು ಪಡೆದಿದ್ದನ್ನು ನಾವು ಗಮನಿಸಿದರೆ ಈ ರಾಷ್ಟ್ರದಲ್ಲಿ ಯಾವುದೇ ಒಂದು ಮೂಲೆಯಲ್ಲಿರುವಂತಹ ಒಬ್ಬ ಬಡ ವ್ಯಕ್ತಿ ಇವತ್ತು ಅತ್ಯುನ್ನತ ಸ್ಥಾನಕ್ಕೆ ಹೋಗಲಿಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ಈ ರಾಷ್ಟ್ರ ತೋರಿಸಿಕೊಟ್ಟಿದೆ. ಇವತ್ತಿನ ದಿವಸ ಆ ವ್ಯಕ್ತಿಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ; ಈ ರಾಷ್ಟ್ರಕ್ಕೆ ಅವರು ನೀಡಿದಂತಹ ಸೇವೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಅದರ ಜೊತೆಗೆ ಅವರು ಮೊದಲು ಸ್ಮರಿಸಿಕೊಂಡಿದ್ದು ಯಾರನ್ನು? ಅವರ ತಾಯಿಯನ್ನು ಇವತ್ತು ಮೊಟ್ಟಮೊದಲು ಅವರು ಸ್ಮರಿಸಿಕೊಂಡರು. ಈ ಸ್ಥಾನವನ್ನು ಪಡೆದಿದ್ದಕ್ಕೆ, ರಾಷ್ಟ್ರದ ಜನತೆ ಈ ಉನ್ನತ ಸ್ಥಾನವನ್ನು ಕೊಟ್ಟಾಗ ಅವರು ತಾಯಿಯನ್ನು ಮೊದಲು ನೆನೆಸಿಕೊಂಡರು; ತಾಯಿ ತಂದೆಯ ಉಪಕಾರ ನೆನೆಸಿಕೊಂಡರು. ಬಹುಶಃ ನಮಗೆಲ್ಲರಿಗೂ ದೇವರು ಎಂದರೆ ಮೊಟ್ಟಮೊದಲು ತಾಯಿ, ತಂದೆ ಇವರನ್ನು ನೆನೆಸಿಕೊಂಡಂತಹ ಒಬ್ಬ ಮಹಾನ್ ವ್ಯಕ್ತಿ ಅವರು. ಅದರ ಜೊತೆಗೆ ಅವರಿಗೆ ಶಿಕ್ಷಣ ನೀಡಿದಂತಹ ಗುರುಗಳನ್ನು ಅವರು ನೆನೆಸಿಕೊಂಡರು. ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಅವರಿಗೆ ವಿದ್ಯಾ, ಜ್ಞಾನಾರ್ಜನೆ ಮಾಡಿಸಿದಂತಹ ಗುರುಗಳನ್ನು ನೆನೆಸಿಕೊಂಡರು. ಅದರ ಜೊತೆಗೆ ಅವರ ಜೊತೆಯಲ್ಲಿಯೇ ಕೆಲಸ ಮಾಡಿದಂತಹ ವಿಜ್ಞಾನಿ ಸ್ನೇಹಿತರು ಯಾರಿದ್ದಾರೆ ಅವರೆಲ್ಲರಿಗೆ ಅವರು ತಮ್ಮ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಇದು ಆ ವ್ಯಕ್ತಿಯಲ್ಲಿರುವಂತಹ ದೊಡ್ಡತನ ಹಾಗೂ ಹಿರಿತನ, ಅದು ನಮಗೆಲ್ಲಾ ಇವತ್ತು ಕಾಣಿಸುತ್ತಿದೆ. ಇದರ ಜೊತೆಗೆ ಆ ವ್ಯಕ್ತಿ ಎಷ್ಟೊಂದು ಜನ ವಿಜ್ಞಾನಿಗಳ ಆದರ್ಶವನ್ನು ತೆಗೆದುಕೊಂಡಿದ್ದರೋ ಅಥವಾ ಅವರ ಜೊತೆಗೆ ಈ ಒಂದು ಕ್ಷೇತ್ರದಲ್ಲಿ ಪರಿಣಿತಿ ಪಡೆದುಕೊಂಡಿದ್ದರೂ ಅವರನ್ನೆಲ್ಲಾ ಸ್ಮರಿಸಿಕೊಂಡರು. ಅಲ್ಲದೆ ಮುಂದಿನ ಯುವ ಜನಾಂಗಕ್ಕೆ ಸಹ ಅವರು ಕರೆ ಕೊಟ್ಟಿದ್ದಾರೆ, ಈ ರಾಷ್ಟ್ರ ನಿರ್ಮಾಣ ಮಾಡುವಲ್ಲಿ ಮುಂದಿನ ಯುವ ಜನತೆ ಮುಂದೆ ಬರಬೇಕು ಎನ್ನುವಂತಹ ಕರೆಯನ್ನು ಕೊಟ್ಟಿದ್ದಾರೆ; ಅಂತಹ ಒಬ್ಬ ವ್ಯಕ್ತಿ ಇವತ್ತು ಭಾರತರತ್ನ ಪ್ರಶಸ್ತಿಯನ್ನು ಪಡೆದಂಥವರು. ಎಲ್ಲಾ ಉನ್ನತ ಪ್ರಶಸ್ತಿಗಳನ್ನು ಪಡೆದಂಥವರು. ಇಷ್ಟೇ ಅಲ್ಲ, ಜಗತ್ತಿಗೇ ಇವತ್ತು ಮಾರ್ಗದರ್ಶನ ಮಾಡುವಂತಹ ಈ ರಾಷ್ಟ್ರಕ್ಕೆ ಒಬ್ಬ ಅತ್ಯುನ್ನತವಾಗಿ ಹಿಂದೆ ಬಂದಂತಹ ಎಲ್ಲಾ ರಾಷ್ಟ್ರಪತಿಗಳ ಜೊತೆಗೆ ಇವರೂ ಉನ್ನತ ರಾಷ್ಟ್ರಪತಿಗಳಾಗಿ ಈ ದೇಶವನ್ನು ಮುನ್ನಡೆಸುತ್ತಾರೆ. ಈ ರಾಷ್ಟ್ರ ಜಾತ್ಯಾತೀತ ರಾಷ್ಟ್ರ ಎನ್ನುವ ದಿಸೆಯಲ್ಲಿ, ಸರಿಯಾದಂತಹ

ಪ್ರಜಾತಂತ್ರವನ್ನು ತರಲಿಕ್ಕೆ ಈ ರಾಷ್ಟ್ರವನ್ನು ಮುನ್ನಡೆಸುತ್ತಾರೆ. ಅಂತಹ ರಾಷ್ಟ್ರಪತಿ ಇವತ್ತು ಪ್ರತಿಜ್ಞಾ ವಿಧಿ ಸ್ವೀಕರಿಸಿದ್ದಕ್ಕೆ ನಾವು ಅಭಿನಂದನೆ ಸಲ್ಲಿಸುತ್ತಿದ್ದೇವೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ ಕುಡುವನಹಳ್ಳಿ (ಕೋಲಾರ):– ಮಾನ್ಯ ಅಧ್ಯಕ್ಷರೆ,ಇವತ್ತು ಡಾ।। ಅಬ್ದುಲ್ ಕಲಾಂ ಅವರು ನಮ್ಮ ದೇಶದ 12ನೇ ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕರಿಸಿರುವುದು ನಮ್ಮೆಲ್ಲರಿಗೂ ಹರ್ಷ ತರುವಂತಹ ವಿಷಯ. ಒಬ್ಬ ವಿಜ್ಞಾನಿಯಾಗಿ ಅವರು ಇವತ್ತು ನಮ್ಮ ದೇಶಕ್ಕೆ ಮತ್ತು ಪ್ರಪಂಚದಲ್ಲಿಯೇ ಹೆಸರು ಮಾಡಿದಂತಹವರು. ಕೋಲಾರದಲ್ಲಿ ನ್ಯಾಷನಲ್ ರೀಸರ್ಚ್ ಅಂಡ್ ಡೆವಲಪ್‌ಮೆಂಟಿನ ಡಿಫೆನ್ಸ್ ಕೆಲಸ ಮಾಡುತ್ತಿದೆ. ಅದು ನನ್ನ ಹಳ್ಳಿ ಪಕ್ಕದಲ್ಲಿಯೇ ಆ ಜಾಗ ಇದೆ. ಆಲ್ಲಿಗೆ ಇತ್ತೀಚೆಗೆ 4-5 ವರ್ಷಗಳಲ್ಲಿ ಅವರು ನಾಲ್ಕು ಸಾರಿ ಬಂದು ಹೋಗಿದ್ದಾರೆ. ಅಲ್ಲಿನ ಜಿಲ್ಲಾಧಿಕಾರಿಗೆ ಆಗಲೀ ಅಥವಾ ಎಸ್‌ಪಿ ಅವರಿಗೆ ಆಗಲೀ ಅದು ಗೊತ್ತಿಲ್ಲ. ಆ ತರಹ ಅವರು ಬಂದು ಹೋಗಿರುವುದು ಈ ದೇಶದ ಬಗ್ಗೆ ಎಷ್ಟೊಂದು ಪ್ರೇಮವನ್ನು ಇಟ್ಟುಕೊಂಡಿದ್ದಾರೆ ಎನ್ನುವುದಕ್ಕೆ ಇದು ಉದಾಹರಣೆ. ಅಲ್ಲಿ ಯಾರೋ ಹಳ್ಳಿಯವರು, ಅವರನ್ನು ನೋಡಿದವರು 'ಇಂಥವರು ಬಂದಿದ್ದರು' ಎಂದು ಹೇಳಿದಾಗ ನನ್ನ ಮೈ 'ಜುಂ' ಎಂದಿತು. ಅವರು ಬೆಂಗಳೂರು ಏರ್‌ಪೋರ್ಟಿಗೆ ಬರದೇ ಬೇರೆ ಏರ್‌ಪೋರ್ಟ್‌ನಲ್ಲಿ ಇಳಿದು ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಬಂದು ಆ ಜಾಗವನ್ನು ನೋಡಿ ಆ ರೀಸರ್ಚ್ ಮತ್ತು ಡೆವಲಪ್‌ಮೆಂಟ್ ಡಿಫೆನ್ಸ್‌ನ ಕೆಲಸ ವೀಕ್ಷಣೆ ಮಾಡುತ್ತಿದ್ದಾರೆ. ನಾನು ಅದರ ಬಗ್ಗೆ ಇಲ್ಲಿ ಹೆಚ್ಚಿಗೆ ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಆ ಕೆಲಸವನ್ನು ಅಂತಹ ಒಬ್ಬ ದೇಶಪ್ರೇಮಿ ಮಾಡುತ್ತಿದ್ದಾರೆ. ಅಂಥವರು ಇವತ್ತು ನಮ್ಮ ರಾಷ್ಟ್ರಪತಿ ಆಗಿರುವುದಕ್ಕಾಗಿ ನಮ್ಮೆಲ್ಲರ ಸಂತೋಷವನ್ನು ನಾನು ವ್ಯಕ್ತಪಡಿಸುತ್ತೇನೆ. ಎರಡನೆಯದಾಗಿ ಇಲ್ಲಿಯವರೆಗೂ ರಾಷ್ಟ್ರಪತಿಯವರಾಗಿದ್ದಂತಹ ಶ್ರೀ ನಾರಾಯಣನ್ ಅವರೂ ಕೂಡ ದಲಿತ ಕುಟುಂಬದಿಂದ ಬಂದು ಇಲ್ಲಿ ಐದು ವರ್ಷಗಳ ಕಾಲ ನಮ್ಮ ರಾಷ್ಟ್ರಪತಿಯಾಗಿ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದಾರೆ. ಅಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ಕೂಡ ಒಳ್ಳೆಯ ಆಡಳಿತ ನೀಡಿದ್ದಾರೆ. ಇವತ್ತು ಅವನ್ನೂ ಸಹ ಸ್ಮರಿಸಿಕೊಳ್ಳಬೇಕಾಗಿದ್ದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ಇವತ್ತು ಅವರಿಗೂ ಸಹ ನಾವು ಅಭಿನಂದನೆಯನ್ನು ಸಲ್ಲಿಸಬೇಕು. ಅವರೇನು ಐದು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ, ಒಂದು ರೆಸಲ್ಯೂಷನ್ ಪಾಸ್ ಮಾಡಿ ಅವರ ಕೆಲಸವನ್ನು ಅಪ್ರೀಷಿಯೇಟ್ ಮಾಡಬೇಕು ಎನ್ನುವಂತಹ ಮಾತನ್ನು ಹೇಳುತ್ತಾ ನನಗೆ ಎರಡು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಏನು ನಿರ್ಣಯವನ್ನು ಮಂಡಿಸಿದ್ದಾರೆ, ನೂತನವಾಗಿ ಈ ರಾಷ್ಟ್ರದ 12ನೇ ರಾಷ್ಟ್ರಪತಿಯಾಗಿ ಆಯ್ಕೆ ಆಗಿರತಕ್ಕಂತಹ ಡಾ।। ಅಬ್ದುಲ್‌ಕಲಾಂ ಅವರನ್ನು ಅಭಿನಂದಿಸತಕ್ಕಂತಹ ಒಂದು ನಿರ್ಣಯದ ಬಗ್ಗೆ ನಮ್ಮ ವೇದಿಕೆಯ ವಿಚಾರವನ್ನು ಹೇಳುತ್ತೇನೆ. ನಾವೂ ಕೂಡ ಅದನ್ನು ಬೆಂಬಲಿಸುತ್ತಾ ಇವತ್ತು ಡಾ।। ಅಬ್ದುಲ್ ಕಲಾಂ ಅವರು ಈ ರಾಷ್ಟ್ರದ 12ನೇ ಅಧ್ಯಕ್ಷರಾಗಿ ಆಯ್ಕೆ ಆಗಿರತಕ್ಕದ್ದು ಬಹಳ ಸಂತೋಷಕರವಾದಂತಹ ವಿಚಾರ ಆಗಿದೆ. ಆದರೆ ಇವತ್ತು ಇಡೀ ಭಾರತ ಮತ್ತು ಇಡೀ ಪ್ರಪಂಚ ಬಹಳ ಗಂಭೀರತೆಯಿಂದ ಏನು ಆಗುತ್ತದೆ? ಯಾವ ರೀತಿ ನಿರ್ವಹಣೆ ಮಾಡುತ್ತಾರೆ ಎಂಬುದನ್ನು ನೋಡುತ್ತಿದೆ. ಒಬ್ಬರು ಅಣು ವಿಜ್ಞಾನಿ ಆಗಿದ್ದುಕೊಂಡು ಸಂವಿಧಾನದ ರಕ್ಷಣೆಯನ್ನು

ಯಾವರೀತಿ ಮಾಡುತ್ತಾರೆ ಎನ್ನುವ ಒಂದು ನಿರೀಕ್ಷಣೆಯನ್ನು ಬಹಳವಾಗಿ ಇಟ್ಟುಕೊಂಡಿರುವುದನ್ನು ನಾವು ನೋಡುತ್ತೇವೆ. ಡಾ।। ಅಬ್ದುಲ್ ಕಲಾಂ ಅವರು ನಿಜವಾಗಿಯೂ ಕೂಡ ಹೃದಯ ಶ್ರೀಮಂತಿಕೆ ಉಳ್ಳವರಾಗಿದ್ದಾರೆ. ನಿಜವಾಗಲೂ ಕೂಡ ಸರಳ ಸಜ್ಜನಿಕೆಯ ನಡವಳಿಕೆ ಉಳ್ಳವರಾಗಿದ್ದಾರೆ. ಬಹುಶಃ ಮೊನ್ನೆ ಅವರು ಬೆಂಗಳೂರಿಗೆ ಬಂದಂತಹ ಸಂದರ್ಭದಲ್ಲಿ ಪತ್ರಿಕೆಯಲ್ಲಿ ಶಾಲಾ ಮಕ್ಕಳಿಗೆ ಪಾಠ ಮಾಡಿಲಿಕ್ಕೆ ಹೋಗಿದ್ದಂತಹ ಚಿತ್ರವನ್ನು ನೋಡಿ ಎಲ್ಲರೂ ಕೂಡ ನಿಜವಾಗಿಯೂ ಮೆಚ್ಚಿಗೆ ವ್ಯಕ್ತ ಮಾಡಿರುವುದನ್ನು ನಾವು ಕಾಣುತ್ತೇವೆ. ಅಂತಹ ಒಬ್ಬ ಮಹಾನ್ ವ್ಯಕ್ತಿ ಇವತ್ತು ನಮ್ಮ ರಾಷ್ಟ್ರಪತಿ ಆಗಿದ್ದಾರೆ. ಎಲ್ಲಾ ಪಕ್ಷದವರೂ ಸಹ ಹೇಳಿದರು; ಚುನಾವಣೆ ಆದರೂ ಕೂಡ ಅದು ಚುನಾವಣೆ ನಡೆದ ಹಾಗೆ ಕಾಣಲಿಲ್ಲ. ಒಂದು ರೀತಿ ಪಕ್ಷಾತೀತವಾಗಿ, ಎಲ್ಲರೂ ಕೂಡ ಒಕ್ಕೊರಳಿನಿಂದ ಇವತ್ತು ಆಯ್ಕೆ ಮಾಡಿರತಕ್ಕದ್ದು ಬಹಳ ಸಂತೋಷಕರವಾದಂತಹ ಸಂಗತಿ ಆಗಿದೆ. ಅವರ ಒಂದು ನೇತೃತ್ವದಲ್ಲಿ ಭಾರತದ ಹಲವಾರು ಸಮಸ್ಯೆಗಳು ಏನು ಇವೆ, ಹಲವಾರು ಸೆಕ್ಯುಲರ್ ಫೋರ್ಸ್‌ನಲ್ಲಿ ಏನೇನೋ ಬೇರೆ ಬೇರೆ ಸಮಸ್ಯೆಗಳು ಇರುವುದರಿಂದ ಈ ಒಂದು ಸಾಲ್ವೇಷನ್ ದಿಕ್ಕಿನಲ್ಲಿ ನೂತನ ರಾಷ್ಟ್ರಪತಿಯವರು ಅದಕ್ಕೆ ಸ್ಪಂದಿಸಿ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುತ್ತಾರೆ ಎನ್ನುವ ನಂಬಿಕೆ ನಮಗೆ ಇದೆ. ಅದೇ ರೀತಿ ನಮ್ಮ ಔಟ್ ಗೋಯಿಂಗ್ ಪ್ರೆಸಿಡೆಂಟ್ ಏನು ಇದ್ದಾರೆ, ಶ್ರೀ ನಾರಾಯಣನ್ ಅವರ ಅವಧಿಯಲ್ಲೂ ಕೂಡ ಈ ಸಂವಿಧಾನವನ್ನು ರಕ್ಷಣೆ ಮಾಡತಕ್ಕದ್ದು, ಈ ರಾಷ್ಟ್ರದ ರಕ್ಷಣೆಯಲ್ಲಿ ಜವಾಬ್ದಾರಿಯುತವಾಗಿ ಕೆಲಸ ಮಾಡಿರತಕ್ಕದ್ದು ಬಹಳ ಮೆಚ್ಚಿಗೆ ಸೂಚಿಸಿ ತಕ್ಕ ವಿಚಾರ ಎಂದು ಹೇಳಿ, ನೂತನ ರಾಷ್ಟ್ರಪತಿಯವರಿಗೆ ಈ ಸದನದಿಂದ, ನಮ್ಮ ವೇದಿಕೆಯಿಂದ ಕೂಡ ಅವರಿಗೆ ಕೃತಜ್ಞತೆಗಳನ್ನು, ಅಭಿನಂದನೆಗಳನ್ನು ಸಲ್ಲಿಸಿಸುತ್ತಿದ್ದೇನೆ - ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು):- ಮಾನ್ಯ ಅಧ್ಯಕ್ಷರೆ, ಈ ದಿವಸ ತಾವು ಮಂಡಿಸಿರುವ ನೂತನ ರಾಷ್ಟ್ರಪತಿಯವರ ವಿಷಯದ ಬಗ್ಗೆ ಅಭಿನಂದಿಸುತ್ತೇನೆ. ಈ ರಾಷ್ಟ್ರದ ಅತ್ಯುನ್ನತ ಸ್ಥಾನವಾದ ರಾಷ್ಟ್ರಪತಿ ಸ್ಥಾನವನ್ನು ಡಾ।। ಅಬ್ದುಲ್ ಕಲಾಂ ಅವರು ಇವತ್ತು ಪ್ರಮಾಣ ವಚನವನ್ನು ತೆಗೆದುಕೊಳ್ಳುವುದರ ಮೂಲಕ ಒಂದು ಜವಾಬ್ದಾರಿಯ ಸ್ಥಾನದಲ್ಲಿದ್ದಾರೆ. ಈ ರಾಷ್ಟ್ರದಲ್ಲಿ ಹಲವಾರು ಭಾಷೆ, ಸಂಸ್ಕೃತಿ, ಧರ್ಮವನ್ನು ಆಚರಿಸುತ್ತಿದ್ದರೂ ಒಂದೇ ರಾಷ್ಟ್ರದ ಅಡಿಯಲ್ಲಿ ಈ ಮಹಾನ್ ರಾಷ್ಟ್ರದ ರಾಷ್ಟ್ರಪತಿಯಾಗಿ ಒಬ್ಬ ಉತ್ತಮ ಚಾರಿತ್ರ್ಯವುಳ್ಳ ವ್ಯಕ್ತಿಯನ್ನು ಈ ರಾಷ್ಟ್ರದ ಸಂಸತ್ ಸದಸ್ಯರು, ವಿಧಾನಸಭಾ ಸದಸ್ಯರು ಆಯ್ಕೆ ಮಾಡಿರುವುದು ಒಂದು ಸಂತೋಷವಾದ ವಿಚಾರ. ಅವರಿಗೆ ದೇಶಭಕ್ತಿ ಬಗ್ಗೆ, ದೇಶದ ಬಡತನದ ಬಗ್ಗೆ, ದೇಶಧ ತಂತ್ರಜ್ಞಾನದ ಬಗ್ಗೆ ಅಪಾರ ಒಲವು ಇದೆ. ಅವರ ಜೊತೆಯಲ್ಲಿಯೇ ಕೆಲಸ ಮಾಡಿದ ಸಹಪಾಠಿಗಳು ದೂರದರ್ಶನದಲ್ಲಿ ಅವರ ವ್ಯಕ್ತಿತ್ವವನ್ನು ಪ್ರಚುರಪಡಿಸಿದಾಗ ಅವರ ವ್ಯಕ್ತಿತ್ವದ ಎತ್ತರವನ್ನು ನಾವು ನೋಡಿದರೆ ಇವತ್ತು ಅಂತಹ ರಾಷ್ಟ್ರಪತಿ ಸ್ಥಾನಕ್ಕೆ ತಕ್ಕದಾದ ವ್ಯಕ್ತಿ, ತನ್ನ ಈ ಒಂದು ಕೆಳವರ್ಗದಲ್ಲಿ ಹುಟ್ಟಿ, ಅಲ್ಪಸಂಖ್ಯಾತ ಜನಾಂಗದಲ್ಲಿ ಹುಟ್ಟಿ ಇವತ್ತು ಇಂತಹ ಉನ್ನತ ಸ್ಥಾನವನ್ನು ಏರಿ ಈ ರಾಷ್ಟ್ರದ ಜವಾಬ್ದಾರಿಯನ್ನು ಹೊತ್ತಂತಹ ಡಾ।। ಅಬ್ದುಲ್ ಕಲಾಂ ಅವರಿಗೆ ಈ ಸಭೆಯ ಮುಖಾಂತರ ಅಭಿನಂದಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎನ್.ಸುಬ್ಬರೆಡ್ಡಿ(ಬಸವನಗುಡಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾನಾಯಕರು ಈ ನಿರ್ಣಯವನ್ನು ತಂದಿರುವ ತಕ್ಷಣ ಬಹಳ ಸಂತೋಷಕರವಾದ ಸಂಗತಿಯಾಗಿದೆ. ಮುಖ್ಯವಾಗಿ ರಾಷ್ಟ್ರಾಧ್ಯಕ್ಷರು ಆ ಸ್ಪಿರಿಚ್ಯುಯಲ್ ಬ್ಯಾಕ್‌ಗ್ರೌಂಡ್‌ನಿಂದ ಬಂದವರು ಅವರು ಯಾವುದೇ ಪಕ್ಷದಲ್ಲಿ ಇದ್ದವರಲ್ಲ, ಬಹಳ ಮುಖ್ಯವಾದ ಸಂಗತಿ ಏನೆಂದರೆ, ಬಹುಶಃ ರಾಷ್ಟ್ರದ ಅತ್ಯುನ್ನತವಾದ ಸ್ಥಾನಕ್ಕೆ ಹೋಗಬೇಕಾದರೆ ಯಾವ ಪಕ್ಷದಲ್ಲೂ ಅವರು ಇದ್ದಂಥವರಲ್ಲ, ಆದರೂ ಒಬ್ಬ ಗ್ರೇಟ್ ಮ್ಯಾನ್ ಎಂದು ನಾವು ಹೇಗೆ ಕರೆಯುತ್ತೇವೆಯೋ ಅಂಥ ವ್ಯಕ್ತಿ ರಾಷ್ಟ್ರಾಧ್ಯಕ್ಷರಾಗಿದ್ದಾರೆ. ಅವರು ಅನೇಕ ಸಲ ಕನ್ಯಾಕುಮಾರಿಗೆ ಭೇಟಿ ಮಾಡಿ ಸ್ವಾಮಿ ವಿವೇಕಾನಂದರ ಸ್ಥಳಕ್ಕೆ ಹೋಗುತ್ತಿದ್ದರು. ಆ ಸ್ಥಳ ಅವರಿಗೆ ಬಹಳವಾಗಿ ಆಕರ್ಷಣೆಯನ್ನು ಕೊಟ್ಟಿರುವ ಸ್ಥಳ. ಅವರು ಅತ್ಯಂತ ಸರಳತೆಯನ್ನು ಹೊಂದಿದವರಾಗಿದ್ದಾರೆ.. ತಾವು 'ರಾಷ್ಟ್ರಾಧ್ಯಕ್ಷರಾಗಿದ್ದೀರಿ, ತಾವು ಸೂಟನ್ನು ಹಾಕಬೇಕೆಂದು ಹೇಳಿದಾಗಲೂ he was not for that. ಅವರು ಹೇಳಿದ್ದಾರೆ, "I want to live a very simple life. That is what is very important." ಎಂದು. ಅದು ಬಹಳ ಮುಖ್ಯವಾದ ಸಂಗತಿ. ವಿಜ್ಞಾನದ ದಿಕ್ಕಿನಲ್ಲಿ ಹೆಚ್ಚಿನ ಜ್ಞಾನೋದಯ, ಈ ಕಡೆ ಆಡಳಿತದ ಬಗ್ಗೆ ಕೂಡ ಗಮನ ಇತ್ತು. ಆದರೂ ಕೂಡ ಬಹಳ ಮುಖ್ಯವಾದ ಸಂಗತಿಯೆಂದರೆ, ಅವರ ಸಿಂಪಲ್ ಲೈಫ್. ಅದು ನಿಜವಾಗಿಯೂ ತುಂಬಾ ಸಂತೋಷಕರವಾದದ್ದು. ರಾಷ್ಟ್ರಾಧ್ಯಕ್ಷರಾಗಿ ಅಂತಹ ಒಬ್ಬ ವ್ಯಕ್ತಿಯನ್ನು ಮಾಡಿರತಕ್ಕದ್ದು ನಮಗೆಲ್ಲಾ ಸಂತೋಷವನ್ನು ಉಂಟು ಮಾಡಿದೆ. ಮಾನ್ಯ ಸಭಾನಾಯಕರು ತಂದಿರುವ ಈ ನಿರ್ಣಯವನ್ನು ಬೆಂಬಲಿಸುತ್ತಾ, ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಸ್.ಎ.ಕೆ.ಖಾದ್ರಿ(ಶಿಗ್ಗಾವ್):- ಮಾನ್ಯ ಉಪಾಧ್ಯಕ್ಷರೆ, ನಮ್ಮ ನಾಯಕರಾಗಿರತಕ್ಕಂಥ ಮಾನ್ಯ ಎಸ್.ಎಂ. ಕೃಷ್ಣರವರು ರಾಷ್ಟ್ರಪತಿಗಳಾಗಿ ಆಯ್ಕೆಯಾಗಿರುವ ಡಾ।। ಅಬ್ದುಲ್ ಕಲಂರವರ ಬಗ್ಗೆ ಅಭಿನಂದನೆಗಳನ್ನು ಸೂಚಿಸಿದ್ದಾರೆ. ಅದಕ್ಕೆ ನನ್ನ ಸಹಮತವನ್ನೂ ವ್ಯಕ್ತಪಡಿಸಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ರಾಷ್ಟ್ರ ಜಾತ್ಯಾತೀತ ರಾಷ್ಟ್ರ; ಇಲ್ಲಿ ಎಲ್ಲಾ ಜಾತಿ, ವರ್ಗದವರು ಇದ್ದಾರೆ. ಈ ರಾಷ್ಟ್ರದ ಶಾಸಕರು ಒಬ್ಬ ಅಲ್ಪಸಂಖ್ಯಾತ, ಒಬ್ಬ ವಿಜ್ಞಾನಿಗೆ ಈ ರಾಷ್ಟ್ರದ ಉನ್ನತ ಹುದ್ದೆಗೆ ಆಯ್ಕೆ ಮಾಡಿದ್ದಕ್ಕೆ ನಿಜಕ್ಕೂ ಈ ರಾಷ್ಟ್ರ ಜಾತ್ಯಾತೀತ ರಾಷ್ಟ್ರ ಎಂಬುದನ್ನು ಇಡೀ ಜಗತ್ತಿಗೇ ತೋರಿಸಿಕೊಟ್ಟಂತಾಗಿದೆ. ಈ ರಾಷ್ಟ್ರದಲ್ಲಿ ಎಲ್ಲಾ ಜಾತಿಯವರಿಗೆ ಸರಿಸಮಾನವಾದ ಹಕ್ಕಿದೆ ಎನ್ನುವಂಥಾದ್ದು ಇದರಿಂದ ಸಾಬೀತಾಗಿದೆ. ಈ ರಾಷ್ಟ್ರದ ಸಂಸದರು, ಶಾಸಕರು ಒಮ್ಮತವನ್ನು ವ್ಯಕ್ತಪಡಿಸಿದ್ದಕ್ಕೆ ನಾನೂ ಕೂಡ ವೈಯುಕ್ತಿಕವಾಗಿ ಅಭಿನಂದಿಸುತ್ತೇನೆ. ಇವತ್ತು ನಮ್ಮ ದೇಶದ ರಾಷ್ಟ್ರಪತಿಗಳಾಗಿರತಕ್ಕಂಥ ಸನ್ಮಾನ್ಯ ಅಬ್ದುಲ್‌ಕಲಾಂರವರು ರಾಷ್ಟ್ರದ ಉತ್ತರೋತ್ತರ ಅಭಿವೃದ್ಧಿಗೆ ಸದಾ ಪ್ರಯತ್ನವನ್ನು ಮಾಡುತ್ತಾರೆ ಎಂಬ ವಿಶ್ವಾಸವನ್ನು ನಾವು ಇಟ್ಟಿದ್ದೇವೆ ಎಂಬ ಮಾತನ್ನು ಹೇಳಿ, ನನಗೆ ಇಲ್ಲಿ ಮಾತಾನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ):- ಮಾನ್ಯ ಅಧ್ಯಕ್ಷರೆ, ಈ ರಾಷ್ಟ್ರದ ರಾಷ್ಟ್ರಾಧ್ಯಕ್ಷರಾಗಿ ಸನ್ಮಾನ್ಯ ಶ್ರೀ ಅಬ್ದುಲ್ ಕಲಾಂರವರ ಏನು ಚುನಾವಣೆ ಮಾಡಿದ್ದಾರೆ ಅದು ನಮ್ಮ ರಾಷ್ಟ್ರದ ಭಾವೈಕ್ಯತೆ ಮತ್ತು ಜಾತ್ಯಾತೀತ ರಾಷ್ಟ್ರದ ಘನತೆಯನ್ನು ಎತ್ತಿ ಹಿಡಿದಂತಾಗಿದೆ. ಇವರು ವಿಜ್ಞಾನಿಗಳಾಗಿದ್ದು, ರಾಷ್ಟ್ರಪತಿಗಳ ಸ್ಥಾನಕ್ಕೆ ಮೊದಲಬಾರಿಗೆ ವಿಜ್ಞಾನಿಯೊಬ್ಬನನ್ನು ತಂದದ್ದು

ಸಂತೋಷದ ವಿಚಾರವಾಗಿದೆ. ಇವರೇನು ನಮ್ಮೆಲ್ಲರ ನಿರೀಕ್ಷೆಯಂತೆ ರಾಷ್ಟ್ರದ ಮುನ್ನಡೆಗೆ, ಏಕತೆ ಮತ್ತು ಭಾವೈಕ್ಯತೆಗೆ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡುತ್ತಾರೆಂದು ನಮಗೆ ನಂಬಿಕೆ ಇದೆ. ಆ ರೀತಿಯಲ್ಲಿ ಅವರು ಬೆಳೆದು ಬಂದ ದಾರಿಯನ್ನು ಅರ್ಥ ಮಾಡಿಕೊಂಡಾಗ ಡಾ।। ಅಬ್ದುಲ್ ಕಲಾಂರವರು ತಮ್ಮ ಜೀವನದ ಅಡಿಯಲ್ಲಿ ಏನು ಹೆಚ್ಚಿಗೆ ವೈಜ್ಞಾನಿಕವಾಗಿ ಚಿಂತನೆಯನ್ನು ನಡೆಸಿರುವಂಥ ಮಹಾನ್ ವ್ಯಕ್ತಿಗಳು ಈ ರಾಷ್ಟ್ರದ ಅಭಿವೃದ್ಧಿಗೂ ಹೆಚ್ಚಿನ ಚಿಂತನೆಯನ್ನು ನಡೆಸುತ್ತಾರೆಂಬ ನಂಬಿಕೆಯನ್ನಿಟ್ಟುಕೊಂಡು, ಏನು ರಾಷ್ಟ್ರದ ಎಲ್ಲಾ ಮೂಲಗಳಿಂದ ರಾಜಕಾರಣಿಗಳು ಅವರನ್ನು ಚುನಾಯಿಸಿ ರಾಷ್ಟ್ರಕ್ಕೆ ಉತ್ತಮವಾದ ಸೇವೆಗೆ ಸ್ವಾಗತ ಮಾಡಿದ್ದಾರೆ, ನಾನೂ ಅವರನ್ನು ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಎಸ್. ಗುರುಸ್ವಾಮಿ(ಚಾಮುಂಡೇಶ್ವರಿ):- ಮಾನ್ಯ ಅಧ್ಯಕ್ಷರೆ, ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ಏನು ನಮ್ಮ ರಾಷ್ಟ್ರದ ನೂತನ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿದ್ದಾರೆ ಅವರಿಗೆ ಈ ಸದನದ ಮೂಲಕ ಮತ್ತು ತಮ್ಮ ಮೂಲಕ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ, ನಾನಾದರೂ ನೋಡುವುದು ಏನೆಂದರೆ, he has sent 3-4 messages to this country. ಏನು ಆ ಮೂರ್ನಾಲ್ಕು ಮೆಸೇಜಸ್ ಎಂದರೆ ಒಂದು, ಈ ರಾಷ್ಟ್ರದ ರಾಷ್ಟ್ರಪತಿಯಾಗುವವರಿಗೆ ಏನು ಪ್ರೊಫೆಷನಲ್ ರಾಜಕಾರಣಿಗಳೇ ಆಗಬೇಕು ಅಥವಾ ಸಮಾಜ ಸೇವೆ ಮಾಡತಕ್ಕವರೇ ಆಗಬೇಕೆಂಬ ಚಿಂತನೆ ಇತ್ತು ಅದಕ್ಕೂ ಮುಂಚೆ ಹೋಗಿ even people other than those can also become President of this country ಎನ್ನತಕ್ಕದ್ದನ್ನು ಇವತ್ತು ಡಾ।। ಎ.ಪಿ.ಜೆ. ಕಲಾಂರವರ ಚುನಾವಣೆಯಲ್ಲಿ ನಾವು ನೋಡುತ್ತಿದ್ದೇವೆ. A scientist, a pure 100% Indian scientist. ಬೇರೆ ಎಲ್ಲರೂ ಹೋದ ದೇಶಕ್ಕೆ ಹೋಗಿ ಸೈಂಟಿಸ್ಟ್ ಆಗುತ್ತಾರೆ. ಆದರೆ ಇವರೊಬ್ಬರು ಮತ್ತು ಸರ್ ಸಿ.ವಿ.ರಾಮನ್‌ರವರು ಇವರುಗಳ ಬಗ್ಗೆ ನನಗೆ ಅತೀವವಾದಂಥ ಗೌರವವಿದೆ. ಏಕೆಂದರೆ ಅವರುಗಳು ಹೊರಗಿನ ಯಾವ ಯೂನಿವರ್ಸಿಟಿಗಳಿಗೂ ಹೋಗಿ ಓದಿದವರಲ್ಲ. ಪಿ.ಹೆಚ್.ಡಿ. ಮಾಡಿದವರಲ್ಲ. ಈ ದೇಶದಲ್ಲೇ ಹುಟ್ಟಿ, ಬೆಳೆದು ಸಿಂಪಲ್ ಆಗಿದ್ದ ದೊಡ್ಡ ಸ್ಥಾನಕ್ಕೆ ಹೋಗಿದ್ದಾರೆಂದರೆ ಇದು ನಮ್ಮ ಮುಂದಿನ ಪೀಳಿಗೆಗೆ ಏನು ಹೊಸ ಸಂದೇಶವನ್ನು ಕೊಡುತ್ತದೆಂದರೆ Anybody by hard working sheer intelligence and talant can occupy the highest office of the country" ಎಂಬುದನ್ನು ಅವರ ಚುನಾವಣೆಯ ವಿಚಾರದಲ್ಲಿ ನೋಡುತ್ತೇವೆ. ಎರಡನೆಯ ಸಂದೇಶವೇನೆಂದರೆ A man who should lead simplicity, honest and integrity of life." ಯಾರು ಲೀಡ್ ಮಾಡುತ್ತಾರೆ ಅವರಿಗೆ ಈ ದೇಶದಲ್ಲಿ ಪುರಸ್ಕಾರವಿದೆ, ಇವತ್ತು ಇರತಕ್ಕ ಕಲುಷಿತ ವಾತಾವರಣದಲ್ಲೂ ಸಹ ಈ ಜನರಿಗೆ ಇವತ್ತು ಪುರಸ್ಕಾರವಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರಿಗೆ ಎಲ್ಲಾ ಪಕ್ಷಗಳೂ ಒಪ್ಪಿಕೊಂಡಿದ್ದಾರೆಂದರೆ ಎಲ್ಲಾ ಪಕ್ಷಗಳಿಗೂ ಸಿಂಪ್ಲಿಸಿಟಿ ಬಗ್ಗೆ, ಹಾನೆಸ್ಟಿ ಬಗ್ಗೆ, ಇಂಟಿಗ್ರಿಟಿ ಬಗ್ಗೆ ನಂಬಿಕೆ ಇದೆ, ಅದರ ಎರಡ್ಮೂರು ಸ್ವಲ್ಪ ಕೊರತೆಯಾಗಿ ಅಡಚಣೆಯಾಗಿರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ಅಧ್ಯಕ್ಷರಾದಂಥ ಸಂದರ್ಭದಲ್ಲಿ ಅನೇಕ ಜನ, ನಾನು ಮೊನ್ನೆ ಸಹ ಟಿ.ವಿ. ನೋಡುತ್ತಿದ್ದ. ಕೆಲವರ ಇಂಟರ್‌ವ್ಯೂಗಳನ್ನು ನೋಡಿದೆ, ಏನು ಇವರನ್ನು ನೋಮಿಯೆ ರಾಷ್ಟ್ರಪತಿಗಳಾಗಿ ಕೆಲಸ ಮಾಡುತ್ತಾರೆಯೇ? ಅವರ ಕೈಯಲ್ಲಿ

ಆಗುತ್ತದೆಯೇ? ಇವರ ವೇಷಭೂಷಣ, ಇವತ್ತು ಬೆಳಿಗ್ಗೆ ಟಿ.ವಿ. ನೋಡಿದವರು ಅವರಿಗೆ ಕೈ ಎತ್ತಿ ನಮಸ್ಕಾರ ಮಾಡಿದರೆ ಏನು ಇವರು ಈ ರೀತಿ ಮಾತನಾಡುತ್ತಾರೆ ಎಂದು ಹೇಳುತ್ತಿದ್ದರು. ಅವರ ರಿಲೀಜಿಯಸ್ ಪ್ರಾಕ್ಟೀಸ್ ಪ್ರಕಾರ ಇನ್ನೊಬ್ಬರಿಗೆ ಹೇಗೆ ವಿಶ್ ಮಾಡಬೇಕೋ ಆ ರೀತಿ ಮಾಡುತ್ತಿದ್ದಾರೆ ಎಂಬ ಮಾತನ್ನು ಅವರುಗಳಿಗೆ ನಾನು ಹೇಳಿದೆ. ಅಂಥ ಸಿಚ್ಯುಯೇಷನ್ ಇರತಕ್ಕ ಒಬ್ಬ ಮನುಷ್ಯ ಇವತ್ತು ನಮ್ಮ ರಾಷ್ಟ್ರಪತಿಗಳಾಗಿ ಉತ್ತಮವಾದ ಸ್ಥಾನದಲ್ಲಿ ಇದ್ದಾರೆ ಎಂದರೆ he has certainly laid down certain good messages to the younger generation ಎನ್ನತಕ್ಕ ಮಾತನ್ನು ಹೇಳತ್ತಾ, ಅವರು ಭಗವದ್ಗೀತೆಯ ಒಂದು ಮಾತನ್ನು ಹೇಳಿದ್ದಾರೆ. ಇದು ಬಹಳಷ್ಟು ನನಗೆ ಹಿಡಿಯಿತು. ಏನೆಂದರೆ, ಬದಲಾವಣೆ ಜೀವನದ ಸಂಕೇತ ಎನ್ನತಕ್ಕ ಮಾತನ್ನು ಅವರು ಹೇಳಿದರು. ಏನಾಗುತ್ತಿದೆ? ಎಲ್ಲವೂ ಒಳ್ಳೆಯದಕ್ಕೇ ಆಗುತ್ತಿದೆ, ಏನು ನಮಗೆ ದೊರಕಿದೆ ಅದು ನಮಗೆ ಭಗವಂತನ ಕೃಪೆಯಿಂದ ದೊರಕಿದೆ, ಏನು ನಮಗೆ ಸಿಕ್ಕಿಲ್ಲ, ಸಿಕ್ಕಿಲ್ಲ ಬಿಡಿ, ಬದಲಾವಣೆಯಾಗುತ್ತಿದೆ, ನಿನ್ನೆ ಆಗಿದ್ದಂಥ ವಸ್ತು ಇವತ್ತು ನಮ್ಮದಾಗಿಲ್ಲ, ನಾಳೆ ಯಾರದ್ದೋ ಆಗಿರುತ್ತದೆ, ಈ ಬದಲಾವಣೆಗಳು ಇರತಕ್ಕ ಈ ಜಗತ್ತು ವಿಸ್ತಾರವಾದದ್ದು, ಇದರಲ್ಲಿ ಎಲ್ಲರೂ ಕೂಡ ಬದುಕಲು ಹಕ್ಕಿದೆ ಎನ್ನತಕ್ಕ ಮಾತನ್ನು ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರವರು ಅವರ ಸಂದೇಶದ ಮಾತುಗಳಲ್ಲಿ ಹೇಳಿದ್ದಾರೆ. ಆ ಭಗವದ್ಗೀತೆಯ ಮಾತುಗಳೂ ನಾವುಗಳು ಮೆಚ್ಚುವಂಥ ಮಾತುಗಳು. ಅವರೊಬ್ಬ ಮುಸ್ಲಿಂ ಧುರೀಣರಾಗಿದ್ದರೂ ಸಹ ಆ ಸಮಾಜದಲ್ಲಿದ್ದೂ ಕೂಡ,

12.50 ಪಿ.ಎಂ.

ನಾನು ಪ್ರತಿ ದಿನ ಭಗವದ್ಗೀತೆಯನ್ನು ಓದುತ್ತೇನೆ ಎಂದು ಹೇಳಿದುದನ್ನು ನೋಡಿದರೆ What a secularism we can find out! ಈ ಗುಣವನ್ನು ನಾವು ಇವತ್ತು ಎಲ್ಲಿ ಕಾಣುತ್ತೇವೆ? ಹಿಂದೆ ಶ್ರೀ ಮೌಲಾನಾ ಅಬ್ದುಲ್ ಕಲಾಮ್ ಆಜಾದ್ ಎನ್ನತಕ್ಕ ಒಬ್ಬನು ನಾಯಕರಿದ್ದರು, ಅವರೂ ಕೂಡ ಈ ರೀತಿಯಾದ ಅಭ್ಯಾಸವನ್ನು ಇಟ್ಟುಕೊಂಡಿದ್ದರು. ನಾನು ಎಲ್ಲಾ ಧರ್ಮಗಳ ಪುಸ್ತಕಗಳನ್ನು ಪ್ರತಿದಿನ ಓದುತ್ತೇನೆಂದು ಅವರ ಜೀವನ ಚರಿತ್ರೆಯ ಪುಸ್ತಕದಲ್ಲಿ ಅವರು ಬರೆದಿದ್ದಾರೆ. ಡಾ|| ಎ.ಪಿ.ಜೆ. ಅಬ್ದುಲ್ ಕಲಾಂರವರೂ ಭಗವದ್ಗೀತೆ ಮತ್ತು ಖುರಾನ್ ಎರಡನ್ನೂ ಓದುತ್ತೇನೆಂದು ಹೇಳಿದಾಗ ಬಹುಶಃ ಈ ದೇಶಕ್ಕೆ ಬೇಕಾಗಿರುವ ಸೆಕ್ಯುಲರಿಸಂನ ಡೈರೆಕ್ಷನ್‌ನನ್ನು ಕೊಡಬಲ್ಲರು ಎಂದು ನನಗಾದರೂ ತುಸುವರಿಕೆಯಾಗಿದೆ. ಇವರೇನು ಹೊಸ ಪೀಳಿಗೆಗೆ ದಾರಿ ತೋರಿಸಿದ್ದಾರೆ ಅದು ಮುಂದಿನ ಜನಾಂಗಕ್ಕೆ ಒಳ್ಳೆಯ ಉದಾಹರಣೆ ಎನ್ನತಕ್ಕ ಮಾತನ್ನು ಹೇಳುತ್ತಾ, ಅವರು ಮುಂದಿನ ಐದು ವರ್ಷಗಳಲ್ಲಿ ಅತ್ಯುತ್ತಮವಾಗಿ ಈ ರಾಷ್ಟ್ರವನ್ನು ಅಭಿವೃದ್ಧಿ ದಿಕ್ಕಿನಲ್ಲಿ ನಡೆಸುತ್ತಾರೆ ಎಂಬ ಪೂರ್ಣ ನಂಬಿಕೆ ನನಗಿದೆ ಅವರಿಗೆ ನಮ್ಮೆಲ್ಲಾಮಲರ ಪರವಾಗಿ ತಮ್ಮ ಮೂಲಕ ಸದನದ ಸದಸ್ಯರ ಶುಭಾಶಯಗಳನ್ನು ತಲುಪಿಸಲು ನಾನು ಇಚ್ಛಿಸುತ್ತೇನೆ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ಧನ್ಯವಾದಗಳು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ(ತುರುವೇಕೆರೆ):- ಮಾನ್ಯ ಅಧ್ಯಕ್ಷರೆ, ರಾಷ್ಟ್ರದ ಖ್ಯಾತ ವಿಜ್ಞಾನಿ ಡಾ|| ಅಬ್ದುಲ್ ಕಲಾಂರವರು ಈ ದಿವಸ 12ನೇ ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿರುವುದು ಇಡೀ ರಾಷ್ಟ್ರಕ್ಕೇ ತಂದ ಗೌರವವೆಂದು ಭಾವಿಸುತ್ತಾ, ಅವರು ಜಾತಿ, ಮತ ಪಂಗಡ ಯಾವುದೂ ಇಲ್ಲದೇ ಸರಳ ಜೀವನದಲ್ಲಿ ಇದ್ದುಕೊಂಡು ಇಡೀ ರಾಷ್ಟ್ರವನ್ನು ಉನ್ನತ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಾರೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲವೆಂಬ ಮಾತನ್ನು

ನಾನು ವ್ಯಕ್ತಪಡಿಸುತ್ತೇನೆ. ಹಿಂದೆ ಬಸವಣ್ಣನವರು ಒಂದು ಮಾತನ್ನು ಹೇಳಿರುವ ಪ್ರಕಾರ ಇವನಾರವ? ಇವನಾರವ? ಇವ ನಮ್ಮವ, ಇವ ನಮ್ಮವ ಎನ್ನತಕ್ಕ ಮಾತನ್ನು ಯಾವ ರೀತಿ ರಾಷ್ಟ್ರದ ಮೂಲಕ ಹೇಳತಕ್ಕ ವ್ಯವಸ್ಥೆ ಮೂಲಕ ಡಾ।।ಅಬ್ದುಲ್ ಕಲಾಂರವರು ರಾಷ್ಟ್ರವನ್ನು ಉನ್ನತ ದಿಕ್ಕಿಗೆ ತೆಗೆದುಕೊಂಡು ಹೋಗುವಲ್ಲಿ ಯಶಸ್ಸನ್ನು ಕಾಣುತ್ತಾರೆ ಎಂಬ ಮಾತನ್ನು ಹೇಳುತ್ತಾ, ಅವರಿಗೆ ಈ ಸದನದ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಸಂಪಂಗಿ(ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಷ್ಟ್ರದ 12ನೇ ರಾಷ್ಟ್ರಪತಿಗಳಾಗಿ ಡಾ।। ಅಬ್ದುಲ್ ಕಲಾಂರವರು ಆ ಪೀಠವನ್ನು ಅಲಂಕರಿಸಿದ್ದಾರೆ. ಇವತ್ತು ನಿಜವಾಗಲೂ ನಾವೆಲ್ಲರೂ ಸಂತೋಷ ಪಡುವಂಥ ದಿನಾ ಕೂಡ ಆಗಿದೆ. ಬಹಳ ಬಡತನದಲ್ಲಿ ಬಂದಂಥ ಒಬ್ಬ ವ್ಯಕ್ತಿ ಇವತ್ತು ಉನ್ನತಮಟ್ಟದ ಅಂದರೆ ರಾಷ್ಟ್ರದ ಅಧ್ಯಕ್ಷ ಪದವಿಯನ್ನು ಪಡೆದಿರುವಂಥಾದ್ದು ಬಹಳ ಸಂತೋಷದ ವಿಷಯ. ಕೆಲವು ಪತ್ರಿಕೆಗಳನ್ನು ನೋಡಿದಾಗ, ಅವರು ಹಿಂದೂ ಪುರಾಣ, ಪೈಗಂಬರರ ತತ್ವಗಳನ್ನು ಇಟ್ಟುಕೊಂಡು ಮೇಲಕ್ಕೆ ಏರಿದಂಥ ಒಬ್ಬರು ವಿಜ್ಞಾನಿ ಎಂದು ಪ್ರಕಟಣೆಯಾಗಿದೆ. ಅವರು ಸಂಗೀತ ವಿದ್ವಾನ್ ಕೂಡ ಆಗಿದ್ದರು ಎಂದು ಪತ್ರಿಕೆಗಳಲ್ಲಿ ಬಂದಿದೆ. ಇಂಥ ಒಬ್ಬ ವ್ಯಕ್ತಿ ಇವತ್ತು ನಮ್ಮ ರಾಷ್ಟ್ರದ ಉನ್ನತ ಮಟ್ಟದಲ್ಲಿರುವ ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿರುವುದರಿಂದ ನಮಗೆಲ್ಲರಿಗೂ ಸಂತೋಷವಾಗಿದೆ. ಅವರು ನಮ್ಮ ರಾಷ್ಟ್ರವನ್ನು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುತ್ತಾರೆ ಎಂಬ ಭಾವನೆಯನ್ನು ವ್ಯಕ್ತಪಡಿಸಿ ಈ ಸದನದಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಇದೇ 15ನೇ ಜುಲೈ 2002 ರಂದು ರಾಷ್ಟ್ರದ ಅತ್ಯುನ್ನತ ಸ್ಥಾನವಾದ ರಾಷ್ಟ್ರಪತಿಗಳ ಸ್ಥಾನಕ್ಕೆ ಚುನಾವಣೆ ನಡೆದು ದೇಶದ ಕ್ಷಿಪಣಿ, ತಂತ್ರಜ್ಞಾನದ ಪಿತಾಮಹ ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ನಮ್ಮ ದೇಶದ 12ನೇ ರಾಷ್ಟ್ರಪತಿಗಳಾಗಿ ಆಯ್ಕೆ ಹೊಂದಿದ್ದು ಈ ದಿನ ಪ್ರಮಾಣವಚನ ಸ್ವೀಕರಿಸಿರುತ್ತಾರೆ. ಡಾ।। ಎ.ಪಿ.ಜೆ. ಅಬ್ದುಲ್ ಕಲಾಂರವರು ಹಾಗೂ ಅವರ ತಂಡ ದೇಶದ ರಕ್ಷಣೆ, ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿನ 14 ವರ್ಷಗಳ ಅನುಭವದಲ್ಲಿ ಐದು ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿ ದೇಶಕ್ಕೆ ಸಮರ್ಪಿಸಿರುತ್ತಾರೆ. ರಕ್ಷಣಾ ದೃಷ್ಟಿಯಿಂದ ಬಹು ಮಹತ್ವವನ್ನು ಹೊಂದಿರುವ "ಅಗ್ನಿ ಕ್ಷಿಪಣಿ" ಇದರಲ್ಲಿ ಒಂದು. 1931ರ ಅಕ್ಟೋಬರ್ 15ರಂದು ಬಡ ಮೀನುಗಾರರ ಕುಟುಂಬದಲ್ಲಿ ಜನಿಸಿದ ಶ್ರೀಯುತರು ಅತ್ಯಂತ ಕಷ್ಟಕರವಾದ ಬದುಕನ್ನು ಅನುಭವಿಸಿ ದೇಶದ ವೈಜ್ಞಾನಿಕ ವಿಭಾಗದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದು ನಮ್ಮ ದೇಶಕ್ಕೆ ಅಪ್ರತಿಮ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಸೇರಿ ಹಲವಾರು ಪ್ರಶಸ್ತಿಗಳನ್ನು ಪಡೆದು ಈ ದಿನ ರಾಷ್ಟ್ರಪತಿಗಳ ಸ್ಥಾನವನ್ನು ಅಲಂಕರಿಸಿ ನಮ್ಮ ದೇಶದ ಪ್ರಥಮ ಪ್ರಜೆಯಾಗಿರುವುದು ನಮಗೆ ಹಮ್ಮೆಯ ವಿಷಯ. ಈ ಸಂದರ್ಭದಲ್ಲಿ ಅವರನ್ನು ನಾನೂ ಸಹ ಈ ಸದನದ ಮೂಲಕ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಇವರ ಅವಧಿಯಲ್ಲಿ ಭಾರತ ದೇಶಕ್ಕೆ ಒಳ್ಳೆಯದಾಗಲಿ ಎಂದು ಆಶಿಸುತ್ತೇನೆ.